# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ. ನಂ.  1216-2019**  **ಪಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಪ್ರಕಾಶ ಎನ್ ಜೆ<br>36 ವರ್ಷ<br>ವ್ಯಾಪಾರ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 15-10-2020. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಆರ್.  ವಕೀಲರಿಂದಃ**

2. ಆರೋಪಿ ತನ್ನ ವ್ಯವಹಾರಕ್ಕಾಗಿ ಹಣದ ಅವಶ್ಯಕತೆ ಇದೆ ಎಂದು ಹೇಳಿ ನನ್ನ ಬಳಿ ಸದರಿ ಸಾಲವನ್ನು ಪಡೆದುಕೊಂಡಿರುತ್ತಾನೆ.  ಆರೋಪಿ ಯು ಸದರಿ ಸಾಲವನ್ನು ನನಗೆ 2 ತಿಂಗಳ ಒಳಗೆ ಮರುಪಾವತಿ ಮಾಡುತ್ತೇನೆ ಎಂದು ಹೇಳಿ ಪಡೆದುಕೊಂಡಿದ್ದ. 2 ತಿಂಗಳು ಕಳೆದ ನಂತರ ನೀವು ಆರೋಪಿಗೆ ಸಾಲ ಮರುಪಾವತಿ ಮಾಡುವಂತೆ ಕೇಳಿ ಡಿಮ್ಯಾಂಡ್ ನೋಟಿಸ್ ನೀಡಿದ್ದೀರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಹಣ ಮರುಪಾವತಿ ಮೌಖಿಕವಾಗಿ ಮಾಡುವಂತೆ  ಕೇಳಿಕೊಂಡಿದ್ದೆ ಆಗ ಆರೋಪಿಯು ಸ್ವಲ್ಪ ಕಾಲಾವಕಾಶ ಬೇಕೆಂದು ಕೇಳಿಕೊಂಡಿದ್ದನು.

3. ಆರೋಪಿ ನನಗೆ ಸುಮಾರು 4-5 ವರ್ಷಗಳಿಂದ ಪರಿಚಿತರಿರುತ್ತಾರೆ. ನಾನು ಮತ್ತು ಆರೋಪಿ ಒಟ್ಟಿಗೆ ಕೆಲಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಹಾಗೂ ಆರೋಪಿ ಒಟ್ಟಿಗೆ ಎಫ್.ಎಂ.ಸಿ.ಜಿ.(fast moving counsumer goods)ಏಜನ್ಸಿ ನಡೆಸುತ್ತೇವೆ ಎಂದರೆ ಸರಿಯಲ್ಲ.   ಸಾಕ್ಷಿಯು ಮುಂದುವೆರದು ನನ್ನ ಏಜನ್ಸಿಯೇ ಬೇರೆ ಇರುತ್ತದೆ, ಅದರ ಹೆಸರು ಶ್ರೀ ನಂಜುಂಡೇಶ್ವರ ಎಂಟರ್ ಪ್ರೈಸಸ್ ಎಂದು ಹಾಗೂ ಆರೋಪಿಯು ವ್ಯವಹಾರದ ಏಜನ್ಸಿ ಬೇರೆ ಇರುತ್ತೆದೆ ಎಂದು ನುಡಿಯುತ್ತಾರೆ. ನನ್ನ ಏಜನ್ಸಿ ಗೆ  ಸಂಬಂಧ ಪಟ್ಟಂತೆ ನನ್ನ ಬಳಿ ದಾಖಲೆ ಇದೆ ಎಂದರೆ ಸರಿ. ಪ್ರತಿ ವರ್ಷ ನಮ್ಮ ಏಜನ್ಸಿ ಆಡಿಟ್ ಆಗುತ್ತದೆ ಎಂದರೆ ಸರಿ. ಸದರಿ ಆಡಿಟ್ ವರದಿಗಳು ನನ್ನ ಬಳಿ ಇದೆ. ನಾನು ಆರೋಪಿಗೆ ನೀಡಿದ ಈ ಸದರಿ ಸಾಲದ ವಿಷಯವನ್ನು ನನ್ನ ಆಡಿಟ್ ನಲ್ಲಿ ತಿಳಿಸಿಲ್ಲ ಎಂದರೆ ಸರಿ.  ನಾನು ಸದರಿ ಏಜನ್ಸಿ ಯನ್ನು 2016 ನೇ ಇಸವಿಯಿಂದ ನಡೆಸುತ್ತಿದ್ದೇನೆ.

4. ಆರೋಪಿಗೆ ಸದರಿ 5 ಲಕ್ಷ ಸಾಲವನ್ನು ನಾನು ವ್ಯವಹಾದಿಂದ ಬಂದ ಹಣ, ನನ್ನ ಉಳಿತಾಯದ ಹಣ, ಲೋನ್ ಹಣ, ಕೃಷಿಯಿಂದಬಂದ ಆದಾಯದಿಂದ ಸದರಿ ಸಾಲ ನೀಡಿರುತ್ತೇನೆ. ಈ ಸಂಬಂಧ ನನ್ನ ಬಳಿ ದಾಖಲೆಗಳು ಇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೃಷಿಯ ಆದಾಯ ತೋರಿಸಲು ನನ್ನ ಬಳಿ ದಾಖಲೆ ಇಲ್ಲ ಆದರೆ ನನ್ನ ಬಂಗಾರವನ್ನು ಒತ್ತೆಇಟ್ಟು ಲೋನ್ ಮಾಡಿದ ಬಗ್ಗೆ ದಾಖಲೆ ಇದೆ. ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಸದರಿ 5 ಲಕ್ಷಗಳನ್ನು ನಗದು ರೂಪದಲ್ಲಿ ಪಾವತಿಸಿರುತ್ತೆನೆ. ಆದರೆ ಒಟ್ಟೆ5 ಲಕ್ಷ ಹಣವನ್ನು ನೀಡಿಲ್ಲ ಬದಲಾಗಿ 2 ಕಂತುಗಳಲ್ಲಿ ಆರೋಪಿಗೆ ಒಟ್ಟು 5 ಲಕ್ಷ ನೀಡಿರುತ್ತೇನೆ. 2017 ನೇ ಇಸವಿಯಲ್ಲಿ ಮೊದಲನೆ ಕಂತು ಎಂದು 3 ಲಕ್ಷಗಳನ್ನು ಆರೋಪಿಗೆ ನೀಡಿದ್ದೆ. 2017 ನೇ ಇಸವಿಯಲ್ಲಿ ಯಾವ ತಿಂಗಳು ದಿನಾಂಕದಂದು ಪಾವತಿ ಮಾಡಿದ್ದೀರಿ ಎಂದು ಹೇಳಬಹುದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಿನಾಂಕವನ್ನು ನನ್ನ ವಕೀಲರಿಗೆ ಹೇಳಿ ಬರೆಸಿದ್ದೇನೆ. ತಿಂಗಳು ಜುಲೈ ಎಂದು ನನಗೆ ನೆನಪಿದೆ. ಮೊದಲನೆ ಕಂತು ಪಾವತಿಸಿದ 10-15 ದಿನಗಳ ನಂತರ 2 ನೇ ಕಂತಿನಲ್ಲಿ ರೂ. 2 ಲಕ್ಷಗಳನ್ನು ಆರೋಪಿಗೆ ನೀಡಿರುತ್ತೆನೇ. ನಾನು ಆರೋಪಿಗೆ ಒಟ್ಟಿಗೆ 5 ಲಕ್ಷ ನೀಡಿಲ್ಲ ಎಂದರೆ ಸರಿ. ಈ ರೀತಿ ನಾನು ಆರೋಪಿಗೆ 2 ಕಂತಿನಲ್ಲಿ ಸಾಲ ನೀಡಿದ ಬಗ್ಗೆ ನನ್ನ ಪಿರ್ಯಾದಿನಲ್ಲಾಗಲಿ ಮತ್ತು ಡಿಮ್ಯಾಂಡ್ ನೋಟಿಸ್ ನಲ್ಲಾಗಲಿ ತಿಳಿಸಿಲ್ಲ ಎಂದರೆ ಸರಿ. ಆರೋಪಿಗೆ ಸಾಲ ನೀಡಿದ ದಿನದಂದು ರೂ.5 ಲಕ್ಷ ನಿಮ್ಮ ಬಳಿ ಇತ್ತು ಎಂದು ತೋರಿಸಲು ನಿಮ್ಮ ಬಳಿ ಯಾವುದಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿಯು ಇದೆ ಎಂದು ಉತ್ತರಿಸುತ್ತಾರೆ.

5. 2019 ನೇ ಇಸವಿಯಲ್ಲಿ ಆರೋಪಿ ನನಗೆ ನಿಪಿ-1 ನ್ನು ನೀಡಿರುತ್ತಾನೆ. ಆರೋಪಿ ನನಗೆ ಒಟ್ಟು 2 ಚೆಕ್ಕುಗಳನ್ನು ನೀಡಿರುತ್ತಾನೆ. ಹಾಗಾದರೆ ಆರೋಪಿಯ ಮತ್ತೊಂದು ಚೆಕ್ ನಿಮ್ಮ ಬಳಿ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿ ಮೊದಲು ಒಂದು ಚೆಕ್ಕನು ನೀಡಿದ್ದರು ಅದನ್ನು ನಗದೀಕರಣ ಪಡಿಸಿಕೊಳ್ಳಲು ಬ್ಯಾಂಕಿಗೆ ಹಾಜರುಪಡಿಸಿದಾಗ ಅದು ಅಮಾನ್ಯಗೊಂಡು ಹಿಂದಿರುಗಿ ಬಂದಿದ್ದು, ಅದನ್ನು ನಾನು ಮತ್ತೊಮ್ಮೆ ಬ್ಯಾಂಕಿಗೆ ಹಾಜರುಪಡಿಸಲಾಗಲಿಲ್ಲ ಬದಲಾಗಿ ಅದನ್ನು ನಾನು ಆರೋಪಿಗೆ ತಿಳಿಸಿದಾಗ ಆರೋಪಿ ಆ ಚೆಕ್ಕನ್ನು ಹಿಂಪಡೆದು ನಂತರ ನಿಪಿ-1 ನ್ನು ನನಗೆ ನೀಡಿರುತ್ತಾನೆ. ಮೇಲೆ ಹೇಳಿದ ಮೊದಲೆ ಚೆಕ್ ಸಹ ರೂ.5 ಲಕ್ಷಗಳಿಗೆ ಆರೋಪಿ ನನಗೆ ಬೆರದುಕೊಟ್ಟಿರುತ್ತಾರೆ. ಈ ಮೇಲೆ ಹೇಳಿದ ವಿಷಯವನ್ನು ನನ್ನ ಪಿರ್ಯಾದಿನಲ್ಲಾಗಲಿ ಮತ್ತು ಡಿಮ್ಯಾಂಡ್ ನೋಟಿಸ್‌ನಲ್ಲಾಗಲಿ ತಿಳಿಸಿಲ್ಲ ಎಂದರೆ ಸರಿ.

6.ನಿಪಿ-1 ನ್ನು ಹೊರತು ಪಡಸಿ ಆರೋಪಿ ಬಳಿ ನಾನು ಬೇರೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರ ಎಂದರೆ ಸರಿ. ನನ್ನ ಆದಾಯ ತೆರಿಗೆ ರಿಟನ್ಸ್‌ನಲ್ಲಿ ನಾನು ಆರೋಪಿಗೆ ನೀಡಿದ ಬಗ್ಗೆ ಸದರಿ ಸಾಲದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**